ಶ್ರೀಮತಿ ಇ.ಇ. ವಾಜ್.—ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ಒಂದೊಂದು ಕಟ್ಟಡಕ್ಕೆ ೭ ೧/೨ ಸಾವಿರ ರೂಪಾಯಿಗಳನ್ನು ಖರ್ಚು ಮಾಡಬೇಕೆಂದಿದ್ದೇವೆ, ಅದಕ್ಕೆ ಸರ್ಕಾರದವರು ೨ ೧/೨ ಸಾವಿರ ರೂಪಾಯಿಗಳನ್ನು ಕೊಡುತ್ತಾರೆ. ತಾಲ್ಲೂಕು ಬೋರ್ಡಿನವರು ೨ ೧/೨ ಸಾವಿರ ರೂಪಾಯಿಗಳನ್ನು ಕೊಡುತ್ತಾರೆ. ಉಳಿದ ೨ ೧/೨ ಸಾವಿರ ರೂಪಾಯಿಗಳನ್ನು ಸಾರ್ವಜನಿಕರ ಚಂದಾದ ಮೂಲಕ ಕೊಡಬೇಕಾಗುತ್ತದೆ. ಸರ್ಕಾರದ ವತಿಯಿಂದ ಕೊಡಬೇಕಾದ ಹಣವನ್ನು ಕೊಟ್ಟಿದೆ. ತಾಲ್ಲೂಕು ಬೋರ್ಡಿನವರು ೨ ೧/೨ ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ, ಸಾರ್ವಜನಿಕರಿಂದ ಬರಬೇಕಾದ ೨ ೧/೨ ಸಾವಿರ ರೂಪಾಯಿ ಸಾರ್ವಜನಿಕ ಕಾಂಟ್ರಿಬ್ಯೂಷನ್ ಬರುತ್ತಿಲ್ಲ. ಅದಕ್ಕೋಸ್ಕರ ಕಲಹಾ ಮಂಡಲಿಯವರಿಗೆ ಒತ್ತಾಯ ಮಾಡಬೇಕೆಂದು ಡೆಪ್ಯೂಟಿ ಕಮಿಷನರಿಗೆ ಆದೇಶ ಕೊಟ್ಟಿದೆ, ಅವರು ಪ್ರಯತ್ನ ಮಾಡಿ ಸಾರ್ವಜನಿಕರಿಂದ ಕಾಂಟ್ರಿಬ್ಯೂಷನ್ ವಸೂಲು ಮಾಡಿ ಆ ಕಟ್ಟಡಗಳನ್ನು ಪೂರೈಸುತ್ತೇವೆ.

ಶ್ರೀ ಪ್ರಭುರಾಜ್ ಪಾಟೀಲ್.—ಈ ಶಾಲಾಕಟ್ಟಡಗಳನ್ನು ಕಟ್ಟುವುದಕ್ಕೆ ಪ್ರಾರಂಭ ಮಾಡಿದು ಯಾವಾಗ ?

ಶ್ರೀಮತಿ ಇ. ಇ. ವಾಜ್.—ಒಂದೊಂದು ಶಾಲೆಯನ್ನು ಯಾವಾಗ ಪ್ರಾರಂಭ ಮಾಡಿದ್ದಾರೆ ಎಷ್ಟನೆಯ ತಾರೀಖಿನಲ್ಲಿ ಪ್ರಾರಂಭವಾಯಿತು ಎಂಬುದನ್ನು ಹೇಳುವುದಕ್ಕಾಗುವುದಿಲ್ಲ. ಇನ್ನೊಂದು ಪ್ರಶ್ನೆಯನ್ನು ಕೇಳಿದರೆ ಪೂರ್ತಿ ತಾರೀಖಿನ ಗಳನ್ನು ಕೊಡಬಹುದು.

ಶ್ರೀ ಪ್ರಭುರಾಜ್ ಪಾಟೀಲ್.—ನನಗೆ ಗೊತ್ತಿರುವ ಹಾಗೆ ೧೯೫೬ನೇ ಇಸವಿಯಲ್ಲಿ ಈ ಶಾಲೆಗಳ ಕಟ್ಟಡಗಳನ್ನು ಪ್ರಾರಂಭ ಮಾಡಿದರು. ಆಲ್ಲಿ ಸಾರ್ವಜನಿಕರಿಂದ ವಂತಿಕೆ ಬಂದಿಲ್ಲ ಎಂದು ಅರ್ಥವಾಗುತ್ತದೆ. ಆಲ್ಲಿ ಕೇವಲ ಬಡವರು ಇದಾರೆ. ಆದ್ದರಿಂದ ಅಲ್ಲಿ ಸಾರ್ವಜನಿಕರ ವಂತಿಕೆ ಬಂದಿಲ್ಲ. ಆದ್ದರಿಂದ ಸರ್ಕಾರದವರೇ ಆ ಶಾಲಾ ಕಟ್ಟಡಗಳನ್ನು ಪೂರ್ತಿ ಕಟ್ಟಿಸಿ ಕೊಡುತ್ತೀರಾ ?

ಶ್ರೀಮತಿ ಇ. ಇ ವಾಜ್.—ಅರ್ಧಂಬರ್ಧ ಆಗಿರುವ ಕಟ್ಟಡಗಳನ್ನು ಆದಷ್ಟು ಜಾಗ್ರತೆ ಕಟ್ಟಿಸಿ ಕೊಡುವುದಕ್ಕೆ ಏರ್ಪಾಡು ಮಾಡುತ್ತೇವೆ. ಇದರ ಜೊತೆಗೆ ಹಿಂದುಳಿದ ಊರುಗಳಲ್ಲಿ ಯಾವ ಯಾವ ಕಡೆ ಕಟ್ಟಡಗಳನ್ನು ಕಟ್ಟುವುದಕ್ಕೆ ಸಾಧ್ಯವಿಲ್ಲ ಎಂದು ಗೊತ್ತಾಗುತ್ತದೆಯೋ ಅಂಥಾ ಕಡೆ ಸರಕಾರದ ವತಿಯಿಂದ ಕಟ್ಟಡವನ್ನು ಕಟ್ಟಿಸಿಕೊಡುವ ಏರ್ಪಾಡು ಮಾಡುತ್ತಿದ್ದೇವೆ.

ಶ್ರೀ ಎಂ. ಬಿ. ರಾಮಸಾ ಮಿ.—(ಅ) ಪ್ರಶ್ನೆಗೆ ಉತ್ತರವಾಗಿ ೮ ಶಾಲೆಗಳ ಕಟ್ಟಡ ಪೂರ್ತಿಯಾಗಿಲ್ಲ ಎಂದು ಹೇಳಿದ್ದೀರಿ. ಈ ಶಾಲೆಗಳಿಗೆ ಸಂಬಂಧಪಟ್ಟಹಾಗೆ ಎಷ್ಟು ಜನ ಸಾರ್ವಜನಿಕರು ಕಾಂಟ್ರಿಬ್ಯೂಷನ್ ಕೊಟ್ಟಿದ್ದಾರೆ, ಒಂದುವೇಳೆ ಉಳಿದವರು ಕಾಂಟ್ರಿಬ್ಯೂಷನ್ ಕೊಡದೇ ಇದ್ದರೆ ಆ ಶಾಲೆಗಳ ಕಟ್ಟಡವನ್ನು ಕಟ್ಟುವುದನ್ನು ಸರ್ಕಾರದವರು ಕೈ ಬಿಡುತ್ತೀರಾ ?

ಶ್ರೀಮತಿ ಇ. ಇ. ವಾಜ್.—ಅವರು ಪೂರೈಸದಿದ್ದರೆ ಸರ್ಕಾರದವರೇ ಆ ಕಟ್ಟಡಗಳನ್ನು ಪೂರೈಸ ಬೇಕಾಗುತ್ತದೆ.

ಶ್ರೀ ಪ್ರಭುರಾಜ್ ಪಾಟೀಲ್.—ಒಂದು ವೇಳೆ ಸಾರ್ವಜನಿಕ ವಂತಿಕೆ ಬಾರದಿದ್ದರೆ ಅಂಥಾ ಕಡೆ ಸರ್ಕಾರದವರೇ ಸಂಪೂರ್ಣವಾಗಿ ಶಾಲಾ ಕಟ್ಟಡಗನ್ನು ಕಟ್ಟಿಸಿಕೊಡುವ ಧೋರಣೆ ಇದೆಯೇ ?

ಶ್ರೀಮತಿ ಇ. ಇ. ವಾಜ್.—ಸರ್ಕಾರದವರೂ ಪ್ರತಿವರ್ಷ ನೂರಾರು ಶಾಲೆಗಳ ಕಟ್ಟಡಗಳನ್ನು ಕಟ್ಟಿಸಿಕೊಡಬೇಕಾಗುತ್ತದೆ. ಒಟ್ಟು ಸಮಸ್ಯೆ ದೇಶದಲ್ಲಿ ೩೨ ೧/೨ ಸಾವಿರ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳು ಇವೆ. ಎಲ್ಲಾ ಕಟ್ಟಡಗಳಿಗೂ ಸರ್ಕಾರದವರೇ ಪೂರ್ತಿ ಹಣವನ್ನು ಖರ್ಚು ಮಾಡಿ ಕಟ್ಟಡವನ್ನು ಕಟ್ಟಿಸುವುದು ಕಷ್ಟವಾಗುತ್ತದೆ. ಸಾರ್ವಜನಿಕರು ತಮ್ಮ ಊರಿನಲ್ಲಿ ಒಂದು ಶಾಲೆಯಾಗಬೇಕು ಎಂದರೆ ಸ್ವಲ್ಪ ತ್ಯಾಗ ಮಾಡಿ ಸ್ವಲ್ಪ ಹಣವನ್ನು ಕೊಡಬೇಕಾಗುತ್ತದೆ.

UPGRADING OF PRIMARY HEALTH UNIT AT KOPPA

725 SRI A. D. BILIGOWDA (Maddur).— Will the Minister for Health be pleased to state.—

(*a*) the action taken to make use of the public contribution of Rs. 40,000 raised for upgrading of the Primary Health Unit at Koppa, Maddur Taluk about three years ago :

(*b*) whether Government have decided to upgrade the present PrimaryHealth Unit at Koppa into a Combined Dispensary :

(*c*) whether Government propose to open Health Units at Bidarkote, Hosagavi and Thyloor in Maddur Taluk and at Hallegere and Shivapura in Mandya Taluk :

(*d*) whether there is any proposal before Government to upgrade the combined dispensary at Maddur into a General Hospital and to provide antirabies injection facilities there ?

SRI DEVENDRAPPA GHALAPPA (Minister of State for Health).—

(*a*) It is proposed to take up the work during 1974-75.

(*b*) Government have already sanctioned a Maternity Ward of 12 beds attached to the existing Primary Health Unit, Koppa.

(*c*) The question where Health Unit Type dispensaries should be located during 1974-75 is under consideration of Government,

(*d*) There is no proposal to upgrade the Combined Dispensary at Maddur at present. But, a donor is coming forward to construct and donate a male ward of 10 beds at Maddur. Antirabies injection facilities will be provided.

ಶ್ರೀ ಎ. ಡಿ. ಬಿಳೀಗೌಡ.—ಸ್ವಾಮಿ ತಮ್ಮ ಉತ್ತರದಲ್ಲಿ ೧೯೭೪-೭೫ ರಲ್ಲಿ ಕಾಮಗಾರಿಯನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ ಎಂದು ಹೇಳಿದ್ದೀರಿ, ಅದನ್ನು ನಿರ್ದಿಷ್ಟವಾಗಿ ಯಾವಾಗ ಕೈಗೊಳ್ಳುತ್ತೀರಿ ಎಂಬುದನ್ನು ಹೇಳುವುದಕ್ಕಾಗುತ್ತದೆಯೇ ?

† ಶ್ರೀ ದೇವೇಂದ್ರಪ್ಪ ಘಾಳಪ್ಪ.—೧೯೭೩-೭೪ನೇ ಸಾಲಿನಲ್ಲಿಯೇ ತೆಗೆದುಕೊಳ್ಳಬೇಕಾಗಿತ್ತು. ಅವರೆ ತಾಲ್ಲೂಕು ಬೋರ್ಡಿನವರು ಮಾಡಿದ ರೆಜುಲ್ಯೂಷನ್ ಪ್ರಕಾರ ಅವರು ೫೦ಸಾವಿರ ರೂಪಾಯಿಗಳನ್ನು ಕೊಡುವುದಕ್ಕೆ ಆಗುವುದಿಲ್ಲ ಎಂದು ಹೇಳಿದ ಮೇಲೆ ಮತ್ತೆ ಸರ್ಕಾರ ಅದನ್ನು ಪರಿಶೀಲನೆ ಮಾಡಿ ಈ ವರ್ಷ ಅದನ್ನು ತೆಗೆದುಕೊಳ್ಳಬೇಕೆಂಬುದು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಎ. ಡಿ. ಬಿಳೀಗೌಡ.—(ಇ) ಪ್ರಶ್ನೆಗೆ ಉತ್ತರವಾಗಿ ೧೯೭೪-೭೫ ರಲ್ಲಿ ಆರೋಗ್ಯ ಘಟಕಗಳನ್ನು ಎಲ್ಲಿ ಪ್ರಾರಂಭಿಸಬೇಕೆಂಬುದು ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದೀರಿ, ಮದ್ದೂರು ತಾಲ್ಲೂಕಿನ ಬೀದರಕೋಟೆ, ಹೊಸಗಾವಿ, ಹಾಗೂ ಅಲೂರು, ಹಂತ್ತು ಹುಂಡ್ಯಾ ತಾಲ್ಲೂಕಿನ ಹಳ್ಳಿಗೆರೆ ಹಾಗೂ ಶಿವಾಪುರ ಗ್ರಾಮಗಳಲ್ಲಿ ಆರೋಗ್ಯ ಘಟಕಗಳನ್ನು ಪ್ರಾರಂಭ ಮಾಡುತ್ತೀರಾ ?

ಶ್ರೀ ದೇವೇಂದ್ರಪ್ಪ ಘಾಳಪ್ಪ.—ಹೋದವರ್ಷ ನೂರಾರು ಕಡೆ ಆರೋಗ್ಯ ಘಟಕಗಳನ್ನು ಪ್ರಾರಂಭ ಮಾಡಬೇಕೆಂದಿದ್ದೆವು. ಆದರೆ ಹಣದ ಕೊರತೆಯಿಂದ ಅವುಗಳನ್ನು ಪ್ರಾರಂಭ ಮಾಡುವುದಕ್ಕೆ ಆಗಲಿಲ್ಲ. ಈ ವರ್ಷ ಈ ಆರೋಗ್ಯ ಘಟಕಗಳನ್ನು ತೆರೆಯಬೇಕೆಂದಿದ್ದೇವೆ. ಈ ವರ್ಷ ಎಲ್ಲಿ ಆರೋಗ್ಯ ಘಟಕಗಳನ್ನು ತೆರೆಯಬೇಕು ಎನ್ನುವುದು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಎ. ಡಿ. ಬಿಳೀಗೌಡ.— ಎಲ್ಲಿ ಪ್ರಾರಂಭ ಮಾಡಬೇಕು ಎನ್ನುವ ಬಗ್ಗೆ ರೆಕಾರ್ಡ್ ಎಲ್ಲಾವಗೈರೆ ಸರ್ಕಾರಕ್ಕೆ ಕೊಟ್ಟಿದೆ. ಆ ಬಗ್ಗೆ ತಾಲ್ಲೂಕು ಬೋರ್ಡಿನವರು ತಾವು ಕೊಡಬೇಕಾದಂತಹ ಕಾಂಟ್ರಿಬ್ಯೂಷನ್ ಕೂಡ ಕೊಡುವುದಕ್ಕೆ ಮುಂದೆ ಬಂದಿದ್ದಾರೆ. ಎಲ್ಲಾ ಕಂಡೀಷನ್‌ಗಳೂ ಫುಲ್ ಫಿಲ್ ಆದರೆ ನಾನು ಕೇಳಿರತಕ್ಕ ಗ್ರಾಮಗಳಲ್ಲಿ ಆರೋಗ್ಯ ಘಟಕಗಳನ್ನು ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ದೇವೇಂದ್ರಪ್ಪ ಘಾಳಪ್ಪ.—ಅದನ್ನು ಪರಿಶೀಲನೆ ಮಾಡೋಣ.

ಅಧ್ಯಕ್ಷರು.—ಸದಸ್ಯರಾದ ಶ್ರೀ ಎ.ಜಿ. ಕೊಡಗಿಯವರು ಈ ಪ್ರಶ್ನೆ ನಂ. ೭೮೦ ಕೇಳಬಹುದು

DEVELOPMENT OF WESTERN GHATS

780 Sri A. G. Kodgi (Baindur) (on behalf of Sri M. Veerappa Molly (Karkala) —

Will the Chief Minister be pleased to state:—

(*a*) whether the Government has formulated and forwarded to the Government of India any scheme for the development and exploitation of Western Ghats in the Fifth Five year Plan period;

(*b*) if so, whether the Government proposes to take up any scheme for the development and exploitation of Western Ghats in the State Fifth Plan period ;

(*c*) whether there is any proposal before the Government to create an agency for the development and exploitation of Ghats ?

Sri D. Devaraj Urs (Chief Minister).—

(*a*) A draft Project report is being prepared.

(*b*) The project is for overall development of the region. The project aims at new schemes over and above the schemes prepared at the district level for implementation during the plan period and the implementation of these schemes depends on the financial assistance from Central Government.

(*c*) The Central Governmen has formed a high level group consisting of the Chief Ministers of Karnataka, Goa, Tamilnadu, Kerala and Maharashtra for the purpose,

The Government is not in favour of creating any additional agency for this purpose.

ಶ್ರೀ ಎ. ಜಿ. ಕೊಡಗಿ.—ಸ್ವಾಮಿ ಈ ಪ್ರಶ್ನೆಗೆ ಕೊಟ್ಟಿರತಕ್ಕ ಉತ್ತರದಲ್ಲಿ ಕರಡು ಯೋಜನಾ ವರದಿಯನ್ನು ತಯಾರಿಸಲಾಗುತ್ತಿದೆ ಎಂದು ಹೇಳಿದ್ದೀರಿ, ಈ ವರದಿಯನ್ನು ಯಾವ ಆಧಾರದ ಮೇಲೆ ತಯಾರಿಸುತ್ತಿದ್ದೀರಿ, ಈ ಬಗ್ಗೆ ಶಾಸಕರು ಕೊಟ್ಟಂತಹ ಕಾರ್ಯಕ್ರಮಗಳನ್ನು ಈ ವರದಿಯಲ್ಲಿ ಸೇರಿಸಿ ಕೊಂಡಿದ್ದೀರಾ ?

†ಶ್ರೀ ಡಿ. ದೇವರಾಜ ಅರಸ್.—ಪ್ಲಾನಿಂಗ್ ಕಮಿಷನ್ನಿನವರು ಒಂದು ಹೈಲ್‌ವೆಲ್ ಕಮಿಟಿಯನ್ನು ಮಾಡಿದ್ದಾರೆ. ಅದರಲ್ಲಿ ಕರ್ನಾಟಕ, ಮಹಾರಾಷ್ಟ್ರ, ಗೋವ ಮತ್ತು ಕೇರಳ ಈ ರಾಜ್ಯಗಳ ಮುಖ್ಯ ಮಂತ್ರಿಗಳು ಇದ್ದಾರೆ. ಈ ಬಗ್ಗೆ ಬೊಂಬಾಯಿನವ್ರು ಒಂದು ಸೆಲ್ ಕೂಡ ಮಾಡಿದ್ದಾರೆ. ಅವರು ಕೆಲವು ವಿಚಾರಗಳನ್ನು ಪರಿಶೀಲನೆ ಮಾಡುತ್ತಿದ್ದಾರೆ ಅವರು ಸಂಬಂಧ ಪಟ್ಟ ಸರ್ಕಾರಗಳಿಂದ ಈ ಪಶ್ಚಿಮ ಘಟ್ಟಗಳ ಅಭಿವೃದ್ಧಿಯ ಬಗ್ಗೆ ಸಲಹೆಗಳನ್ನು ತೆಗೆದುಕೊಳ್ಳುತ್ತಾರೆ. ಸರ್ಕಾರದವರು ಸಲಹೆಗಳನ್ನು ಕಳುಹಿಸುವಾಗ ಶಾಸಕರು ಕೊಟ್ಟಂತಹ ಸಲಹೆಗಳನ್ನೂ ವಿಚಾರ ಮಾಡಿ ಸೂಕ್ತವಾದವುಗಳನ್ನು ಅದರಲ್ಲಿ ಸೇರಿಸಿಕೊಂಡು ಆ ಸೆಲ್ಲಿಗೆ ಕಳುಹಿಸುತ್ತೇವೆ.